ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆಗ್ರಿಕಲ್‌ಚರಲ್ ರಿಫೈನಾನ್ಸ್ ಕಾರ್ಪೊರೇಷನ್ ಸ್ಕೀಂ ಬಂದಮೇಲೆ ದಕ್ಷಿಣ ಕನ್ನಡ ಜಿಲ್ಲೆಗೆ 125 ಲಕ್ಷ ಮತ್ತು ನಾರ್ತ್ ಕೆನರಾ ಜಿಲ್ಲೆಗೆ 50 ಲಕ್ಷ ಕೊಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೌತ್ ಕೆನರಾ ಕೋ ಆಪರೇಟೀವ್ ಮಾರ್ಕೆಟಿಂಗ್ ಫೆಡರೇಷನ್ ಅವರೇ ಅದನ್ನು ಹಂಚುತ್ತಾರೆ. ಅದುದರಿಂದ ಸರ್ಕಾರದವರು ಆ ಪ್ರದೇಶಕ್ಕೆ ಹಾಚುವುದಕ್ಕೆ ಹೋಗಿಲ್ಲ. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋ ಆಪರೇಟೀವ್ ಯೂನಿಯನ್‌ನವರು ಬೋಟುಗಳನ್ನು ಕಟ್ಟದೇ ಇರುವುದರಿಂದ ಸರ್ಕಾರದವರೇ ಇರಾಖೆಯವರ ಮೂಲಕ ಕೊಡತಕ್ಕಂಥ ಒಂದು ಪ್ರಮೇಯ ಒದಗಿತು.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಎ. ಆರ್. ಸಿ. ಸ್ಕೀಂ ಮುಗಿಯುತ್ತಾ ಇರುವುದರಿಂದ, ಬೋಟುಗಳಿಗೆ ಹೆಚ್ಚು ಹೆಚ್ಚು ಬೇಡಿಕೆ ಇರುವುದರಿಂದ ಮುಂದೆ ಬೋಟುಗಳನ್ನು ಕೊಡುವ ಯೋಜನೆ ಯಾವ ರೀತಿ ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆಗ್ರಿಕಲ್‌ಚರಲ್ ರಿಫೈನಾನ್ಸ್ ಕಾರ್ಪೊರೇಷನ್ ಅವರನ್ನೇ ಮುಂದುವರಿಸಬೇಕು ಎನ್ನುವ ಒಂದು ಯೋಜನೆ ಇದೆ. ಅವರಿಗೆ ಸಬ್ಸಿಡಿ ಮತ್ತು ಲೋನ್ ಕೊಡುತ್ತೇವೆ. ಮುಂದೆ 510 ಬೋಟ್‌ಗಳನ್ನು ಮಾಡುವುದಕ್ಕೆ ಒಂದು ಏರ್ಪಾಡುಮಾಡುತ್ತೇವೆ. ಅದಕ್ಕಾಗಿ ಸರ್ಕಾರದವರು 150 ಲಕ್ಷ ರೂಪಾಯಿಗಳನ್ನು ಸಬ್ಸಿಡಿ ಕೊಟ್ಟಿದ್ದಾರೆ. ಆರು ಕೋಟಿ ರೂಪಾಯಿಗಳಷ್ಟು ಎ. ಆರ್. ಸಿ. ಯವರು ಕೊಡಲು ಒಪ್ಪಿಕೊಂಡಿದ್ದಾರೆ. ಅದನ್ನು ಕಾರ್ಯಗತ ಮಾಡಲಿಕ್ಕೆ ಲೋನ್ ಕಮ್ ಸಬ್ಸಿಡಿ ಕೊಡುತ್ತೇವೆ. ಜೊತೆಗೆ ಬ್ಯಾಂಕುಗಳವರು ಸಹ ಹೆಚ್ಚಿನ ಸಹಾಯ ಮಾಡುವುದಕ್ಕೆ ಮುಂದೆ ಬರುತ್ತಾ ಇರುವುದರಿಂದ ಈ ಸ್ಕೀಮನ್ನು ಮುಂದುವರಿಸುವ ಯೋಜನೆ ಸರ್ಕಾರದವರು ಮಾಡುತ್ತಾರೆ.

ಶ್ರೀಮತಿ ಕೆ. ಲೀಲಾವತಿ ರೈ.—ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೌತ್ ಕೆನರಾ ಕೋ ಆಪರೇಟೀವ್ ಮಾರ್ಕೆಟಿಂಗ್ ಫೆಡರೇಷನ್ ಅವರ ಮುಖಾಂತರ ಬೋಟುಗಳನ್ನು ಕೊಟ್ಟಿದೆ, ಇರಾಖೆ ಮುಖಾಂತರ ಒಂದು ಇಲ್ಲ. ಅದುದರಿಂದ ತಮ್ಮಲ್ಲಿ ಉಳಿದಿರುವ ಅಪ್ಲಿಕೇಷನ್‌ಗಳಿಗೆ ಬೋಟುಗಳನ್ನು ಕೊಡಲು ಮುಂದೆ ಬಾರದಿದ್ದಲ್ಲಿ ಡಿಪಾರ್ಟ್‌ಮೆಂಟ್ ಮುಖಾಂತರ ಕೊಡುವ ಸಂದರ್ಭ ಇಪೆಯೇ ಹಾಗಿದ್ದಲ್ಲಿ ಬೇಗ ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಪ್ರಶ್ನೆಗೆ ಆಗಲೇ ಉತ್ತರ ಹೇಳಿದ್ದೇನೆ. ಇದು ಎ.ಆರ್.ಸಿ. ಪ್ರೋಗ್ರಾಂನಲ್ಲಿದೆ. ಡಿಪಾರ್ಟ್‌ಮೆಂಟ್‌ನವರು ಬೋಟುಗಳನ್ನು ಕೊಡುವ ಕಾರ್ಯಕ್ರಮ ಇಟ್ಟುಕೊಂಡಿಲ್ಲ. ಬೋಟುಗಳನ್ನು ಅವರೇ ಹಂಚುತ್ತಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ಅಂಕಿಅಂಶಗಳನ್ನು ನೋಡಿದರೆ ಉತ್ತರ ಕನ್ನಡ ಜಿಲ್ಲೆಗೆ ಅನ್ಯಾಯವಾಗಿದೆ. 1967-68 ಮತ್ತು 1968-69 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಡಿಪಾರ್ಟ್‌ಮೆಂಟ್ ಮುಖಾಂತರ ಒಂದು ಬೋಟನ್ನೂ ಕೊಟ್ಟಿಲ್ಲ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಆದರೆ ಸರ್ಕಾರದವರು ಅನೇಕ ಬೋಟುಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಹಾಗಾದರೆ ದಕ್ಷಿಣ ಕನ್ನಡ ಜಿಲ್ಲೆಗೆ ಕೊಟ್ಟಿರುವ ಸಂಖ್ಯೆ ಎಷ್ಟು ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಅವರು ಕೊಟ್ಟಿರತಕ್ಕಂಥ ಮೆಕನೈಸ್ಡ್ ಬೋಟ್ಸ್ ಒಟ್ಟು 529. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ 328, ಉತ್ತರ ಕನ್ನಡ ಜಿಲ್ಲೆಗೆ 201. ಉತ್ತರ ಕನ್ನಡ ಜಿಲ್ಲೆಗೆ ಕಡಿಮೆ ಬೋಟುಗಳನ್ನು ಕೊಟ್ಟಿರುವುದಕ್ಕೆ ಕಾರಣ ಇನ್ನೂ ಅಲ್ಲಿ ಬೋಟುಗಳು ತಯಾರಾಗುತ್ತಾ ಇಲ್ಲ. ಅದನ್ನು ಸಂಪಡಿಸಬೇಕೆಂದು ದಕ್ಷಿಣ ಕನ್ನಡ ಜಿಲ್ಲೆಯ ಕೋ-ಆಪರೇಟಿವ ಬೋಟ್ ಬಿಲ್ಡಿಂಗ್ ಯಾರ್ಡ್ ಅವರನ್ನು ಕೇಳಿದ್ದೇವೆ. ಅವರು ಕಳುಹಿಸುತ್ತಾರೆ.

Sanction of Additional Posts of Teachers in District School Board, Dharwar.

941. Sri SIDDAIAH KASIMATH (Shirahatti).—

Will the Minister for Education be pleased to state :—

(*a*) the number of teachers working in District School Board, Dharwar (Separate figures male and female be furnished) ;

(SRI SIDDAIAH KASHIMATH)

(*b*) the total number of students studying in Primary Schools run by District School Board, Dharwar (Separate figures of Boys and Girls may be furnished) ;

(*c*) the additional number of teachers required to fulfil the conditions prescribed by the Government ?

Sri N. M. KOTRABASAIAH SOGI (Deputy Minister for Education).—

(*a*)

Male	Female	Total
5,436	872	6,308

(As in 1967-68)

(*b*) Boys: 1,66,042
Girls: 1,19,773

Total... 2,85,815

(*c*) Number of teachers working is sufficient for the present. 159 additional posts, have been sanctioned for Dharwar District during 1968-69.

Sri SIDDAIAH KASIMATH.—What is the ratio between teachers and students ?

†**Sri N. M. KOTRABASIAH SOGI.**—The intention of the Government is to keep the ratio at 1:40 on the basis of on enrolment. Now we have adopted the policy of fixing it on the basis of actual attendance at 1:30.

Sri SIDDIA KASIMATH.—How many trained and untrained teachers are there in the School Boards ? Are not trained teachers to be recruited in place of untrained teachers ?

Sri N. M. KOTRABASAIAH SOGI.—We are taking all the necessary steps to get untrained teachers trained.

ಶ್ರೀ ಸಿದ್ದಯ್ಯ ಕಾಶಿಮಠ.—ಧಾರವಾಡ ಜಿಲ್ಲಾಬೋರ್ಡಿನವರು ಎಷ್ಟು ಜನ ಶಿಕ್ಷಕರ ಜಾಗ ಗಳು ಬೇಕು ಎಂದು ಮಾಗಣಿ ಮಾಡಿದ್ದರು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—375 ಶಿಕ್ಷಕರ ಜಾಗ ಬೇಕು ಎಂದು ಕೇಳಿದರು. ಹಣದ ಅನುಕೂಲತೆ ಮತ್ತು ಇರತಕ್ಕ ಉಪಾಧ್ಯಾಯರು ಎಲ್ಲವನ್ನೂ ನೋಡಿಕೊಂಡು 159 ಜಾಗ ಗಳನ್ನು ಮಂಜೂರು ಮಾಡಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಉಪಾಧ್ಯಾಯರ ಮತ್ತು ಉಪಾಧ್ಯಾಯಿನಿಯರ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಸಂಖ್ಯೆ ಸರಿಸಮಾನವಾಗಿದೆ. ಈಗ ಉಪಾಧ್ಯಾಯಿನಿಯರ ಸಂಖ್ಯೆ ಕಡಮೆ ಇರುವುದರಿಂದ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಣ ಕೊಡಲು ಇವರ ಸಂಖ್ಯೆ ಹೆಚ್ಚಾಗಿ ಬೇಕಾಗಿರುವುದರಿಂದ ಈಗ ಮಂಜೂರು ಮಾಡಿರುವ 159 ಸ್ಥಾನಗಳಿಗೆ ಹೆಚ್ಚಾಗಿ ಉಪಾಧ್ಯಾಯಿನಿಯರನ್ನೇ ತೆಗೆದುಕೊಳ್ಳಬೇಕೆಂದು ಆದೇಶ ಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಹಿಳ ಶಿಕ್ಷಕಿಯರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಟ್ಟು ಅವರನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಎನ್. ಎ. ಜನ್ನೇಗೌಡ.—2,85,815 ಎನ್‌ರೋಲ್‌ಮೆಂಟ್ ಸಂಖ್ಯೆಯೇ ಅಥವಾ ಅಟೆಂಡೆನ್ಸ್ ಸಂಖ್ಯೆಯೇ ಸ್ವಾಮಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎನ್‌ರೋಲ್‌ಮೆಂಟ್ ನಂಬರ್.

Sri K. H. PATIL.—Are the Government aware that many of the applications from lady teachers have been rejected on the ground that there are no vacancies ? So, will the Government consider the question of enrolling as many lady candidates as are avoilable and see that they are employed ?

Sri N. M. KOTRABASIAH SOGI.—No such instances have come to the notice of the Government. Anyway, we are giving all preference to lady candidates and we are appointing all the qualified lady candidates.

Increase in tuition fees in Commerce Schools

949. Sri T. R. SHAMANNA (Fort).—

Will the Minister for Education be pleased to state :—

(*a*) whether the Mysore State Commerce Institutes' Association had made a proposal that the rates of tuition fee in the case of Commerce subjects in Commerce Schools may be increased by Re. 1 ;

(*b*) if so, the action taken by Government in the matter ;

(*c*) the number of Commerce Schools functioning in the city and State and the number of them that are given Government grants ;

(*d*) the total number of students studying in those Schools ?

Sri N. M. KOTRABASAIAH SOGI (Deputy Minister for Education).—

(*a*) Yes, at different rates of increase.

(*b*) the proposal has been turned down.

(*c*) (i) In City ... 99
(ii) In State ... 302
(iii) Those receiving grants 6

(*d*) 50,369.

ಶ್ರೀ ಟಿ. ಆರ್. ಶಾಮಣ್ಣ.—ವಾಣಿಜ್ಯ ಸಂಸ್ಥೆಗಳಿಗೆ ಹೆಚ್ಚುವರಿ ಶುಲ್ಕದಾವನ್ನು ಕೊಡುವುದನ್ನು ನಿರಾಕರಿಸಿದೆ ಎಂದು ಹೇಳಿದ್ದಾರೆ. ಯಾವ ಕಾರಣದಿಂದ ನಿರಾಕರಿಸಲಾಗಿದೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವೇ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಇರುವ ಶುಲ್ಕವೇ ಸಾಕಷ್ಟು ಇವೆ. ಅದಕ್ಕಿಂತ ಹೆಚ್ಚಿಗೆ ಮಾಡಿದರೆ ವಾಪಸಂಗ ಮಾಡುವವರ ತಂದೆತಾಯಿಗಳಿಗೆ ಹೆಚ್ಚಿನ ಭಾರ ಆಗುತ್ತದೆ ಎನ್ನುವುದು ಒಂದು; ಮೇಲಾಗಿ ಈಗಿರತಕ್ಕ ಶುಲ್ಕದಿಂದಲೇ ಮ್ಯಾನೇಜ್‌ಮೆಂಟ್ ಸರಿಯಾದ ರೀತಿಯಲ್ಲಿ ಕೆಲಸ ನಡೆಸುತ್ತಿದೆ, ಅದನ್ನು ಹೆಚ್ಚು ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ಸರ್ಕಾರಕ್ಕೆ ಮನವರಿಕೆಯಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ರಾಜ್ಯದಲ್ಲಿರುವ 302 ವಾಣಿಜ್ಯ ಶಾಲೆಗಳಲ್ಲಿ 50 ಸಾವಿರಕ್ಕಿಂತ ಹೆಚ್ಚು ಜನ ವ್ಯಾಸಂಗ ಮಾಡುತ್ತಿದ್ದಾರೆ. 302 ಸಂಸ್ಥೆಗಳಲ್ಲಿ ಕೇವಲ ಆರು ಸಂಸ್ಥೆಗಳಿಗೆ ಮಾತ್ರ ಗ್ರಾಂಟ್ ಒದಗುತ್ತಿದೆ. ಎಷ್ಟು ಗ್ರಾಂಟ್ ಕೊಡುತ್ತಿದ್ದೀರಿ ಎನ್ನುವುದನ್ನು ತಿಳಿಸುವುದಕ್ಕೆ ಆಗುತ್ತದೆಯೇ ?